DEMAND NO. 48.—CAPITAL OUTLAY ON PUBLIC WORKS.

103. Capital Outlay on Public Works.

"That a further sum not exceeding Rs. 5,12,100 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Public Works'."

DEMAND NO. 54.—ADVANCES AND LOANS.

Q. Loans and Advances by State/Union Territory Governments.

"That a further sum not exceeding Rs. 90,00,200 be granted to the Government to defray the charges which will come in course of payment during the financial year for the period ending 31st day of March 1967, in respect of 'Loans and Advances by State/Union Territory Governments'."

Mr. SPEAKER.—Before we disperse for Tea, I want to suggest that the resolution and the ordinance Bill may be discussed together. On the prior occasion we had not realised any additional benefit by discussing them separately. Otherwise I am going to allow 15 minutes to the resolution and put it to vote and finish with it. Now we will adjourn for tea for 20 minutes and re-assemble thereafter.

The House adjourned for Recess at Thirty Minutes past Three of the Clock and re-assembled at Fifty Minutes past Three of the Clock.

(MR. DEPUTY SPEAKER in the Chair)

RESOLUTION DISAPPROVING THE MYSORE LAND REFORMS (AMENDMENT) ORDINANCE, 1966.

Sri S. GOPALA GOWDA.—Sir, I beg to move:

"That this House disapproves the Mysore Land Reforms (Amendment) Ordinance, 1966 (Ordinance No. 2 of 1966)."

Mr. DEPUTY SPEAKER.—Resolution moved:

"That this House disapproves the Mysore Land Reforms (Amendment) Ordinance, 1966 (Ordinance No. 2 of 1966)."

Sri M. V. KRISHNAPPA (Minister for Revenue).—Sir, I beg to move :

" That the Mysore Land Reforms (Amendment) Bill, 1966, be taken into consideration."

Mr. DEPUTY SPEAKER.—Motion moved :

" That the Mysore Land Reforms (Amendment) Bill, 1966, be taken into consideration."

The Resolution will be discussed first.

†ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರೇ, ಈ ಸಭೆ ಅಧಿವೇಶನದಲ್ಲಿ ಇಲ್ಲದೇ ಇದ್ದಾಗ ರಾಜ್ಯಪಾಲರು ಒಂದು ಅಧ್ಯಾದೇಶವನ್ನು ಹೊರಡಿಸಿ ಭೂಸುಧಾರಣಾ ಕಾನೂನಿನ 16ನೇ ವಿಧಿಯನ್ನು ತಿದ್ದುಪಡಿ ಮಾಡಿ ತಮ್ಮ ಶಾಸನ ಮಾಡತಕ್ಕಂಥ ಅಧಿಕಾರವನ್ನು ಚರಾಯಿಸಿದ್ದಾರೆ. ನಾನು ಈ ನಿರ್ಣಯದ ಮೂಲಕ ಇಂಥಾ ಅಧ್ಯಾದೇಶವನ್ನು ಈ ಮಾನ್ಯ ಸಭೆ ಒಪ್ಪಬಾರದು, ಅಂಗೀಕರಿಸಬಾರದು, ಅದನ್ನು ತಿರಸ್ಕರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ, ಈ ಅಧ್ಯಾದೇಶವನ್ನು ರಾಜ್ಯಪಾಲರು ಸರ್ಕಾರದ ಮಾತಿನ ಮೇರೆಗೆ ಹೊರಡಿಸಿದ್ದಾರೆ. ಈ ಮಸೂದೆಗೆ ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಬೇಕು. ಅದರಂತೆ ರಾಷ್ಟ್ರಾಧ್ಯಕ್ಷರು ಇದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ರೀತಿ ಅಧಿನಿಯಮವನ್ನು ಅಥವಾ ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಇದರಲ್ಲಿ ಮುಖ್ಯವಾಗಿ ನಾನು ತಾತ್ವಿಕವಾದ ಅಂಶಗಳನ್ನು ಪ್ರಶ್ನೆ ಮಾಡುವುದಿಲ್ಲ. ಅಥವಾ ತಾಂತ್ರಿಕವಾದ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಈಗಾಗಲೇ ಒಂದು ಸುಗ್ರೀವಾಜ್ಞೆಯ ಬಗ್ಗೆ ಮಾತನಾಡುವಾಗ ನಾವು ಈ ಸಭೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ ; ಈ ರೀತಿ ವಿಶೇಷವಾದ ಅಧಿಕಾರವನ್ನು ರಾಜ್ಯಪಾಲರು ತೆಗೆದುಕೊಳ್ಳತಕ್ಕಂಥ ಸಂದರ್ಭವೇನೂ ಇರಲಿಲ್ಲ ಎಂದು.

[MR. SPEAKER in the Chair]

ನಾನ್-ಗೆಜಿಟೆಡ್ ನೌಕರರ ಮುಷ್ಕರ ಆಗಬಾರದು ಎಂದು ಅದನ್ನು ನಿಲ್ಲಿಸುವುದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕ್ರಮ ಆಗಿತ್ತು. ಆದರೆ ಇಲ್ಲಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಭೂಸುಧಾರಣಾ ಕಾನೂನನ್ನು ರಾಜ್ಯ ಸರ್ಕಾರದವರು 1965ನೇ ಇಸವಿ ಅಕ್ಟೋಬರ್ ಎರಡನೆಯ ತಾರೀಖು ಗಾಂಧಿ ಜಯಂತಿಯ ದಿವಸ ಜಾರಿಗೆ ಕೊಟ್ಟಂಥ ಸಂದರ್ಭದಲ್ಲಿ ಈ ಕಾನೂನಿನಲ್ಲಿ ಯಾವುದೋ ಒಂದು ವಿಧಿಗೆ ಸಂಬಂಧಪಟ್ಟಹಾಗೆ ತಿದ್ದುಪಡಿ ಮಾಡುವುದಕ್ಕೆ ರಾಜ್ಯಪಾಲರು ಅಧಿನಿಯಮವನ್ನು ಹೊರಡಿಸುತ್ತಾರೆ ಎಂದು ನಾನು ಯೋಚನೆ ಮಾಡಿರಲಿಲ್ಲ. ಈ ಸರ್ಕಾರ ಎಷ್ಟರಮಟ್ಟಿಗೆ ಪಟ್ಟಭದ್ರ ಹಿತಗಳ (ವೆಸ್ಟೆಡ್ ಇಂಟ್ರೆಸ್ಟ್) ರಕ್ಷಣೆ ಮಾಡುವುದಕ್ಕಾಗಿಯೇ ಇಲ್ಲಿ ಕುಳಿತುಕೊಂಡಿದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಇದು ಈ ಸರ್ಕಾರಕ್ಕೆ ಭೂಸುಧಾರಣೆಯನ್ನು ಜಾರಿಗೆ ತರುವುದರ ಬಗ್ಗೆ ಏನೇನೂ ನಂಬಿಕೆಯಿಲ್ಲ ಎನ್ನುವುದನ್ನು ಮಾತ್ರ ಇದು ಸ್ಪಷ್ಟಪಡಿಸುವುದಿಲ್ಲ; ಇವರು ಭೂಸುಧಾರಣೆಯನ್ನು ತರಬಾರದು ಎಂದು ಹೇಳಿ ಕಳೆದ 20 ವರ್ಷಗಳಿಂದಲೂ ಯಾವ ಶಕ್ತಿಗಳು ಈ ದೇಶದಲ್ಲಿ ಒಂದೇ ಸಮನೆ ಪ್ರಯತ್ನ ಮಾಡುತ್ತಾ ಇವೆಯೋ, ಈ ಕಾನೂನನ್ನು ಮಾಡಿದಾಗ್ಯೆ ಅವು ಕಾರ್ಯಗತವಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿವೆಯೋ ಅಂಥಾ ಶಕ್ತಿಗಳಿಗೆ ಈ ಸರ್ಕಾರ ತನ್ನನ್ನು ತಾನು ಮಾರಾಟ ಮಾಡಿಕೊಂಡಿದೆ. ಇಂಥವರ ಆಸಕ್ತಿಯನ್ನು ಎತ್ತಿ ಹಿಡಿಯುವುದರಲ್ಲಿ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಬಿಲ್ಲಿನ ಮೇಲೆ ಮಾತನಾಡಬೇಕು. ಆರ್ಡಿನೆನ್ಸ್ ತಂದದ್ದು ಬೇರೆ ಕಾರಣಗಳಿಂದ. ಈಗ ನೀವು ಅದರ ಮೇಲೆ ಮಾತನಾಡುತ್ತಿದ್ದೀರಿ.

4-00 P M.

ಶ್ರೀ ಎಸ್. ಗೋಪಾಲ ಗೌಡ.—ಇದು ನನಗೆ ಅರ್ಥವಾಗುವುದಿಲ್ಲ. ನಾನು ಏನು ಹೇಳುತ್ತಿದ್ದೇನೆ ಎನ್ನುವುದು ತಮಗೆ ಹೇಗೆ ಅರ್ಥವಾದೀತು ?

ಅಧ್ಯಕ್ಷರು.—ನಾನು ಕನ್ನಡದಲ್ಲಿ ಮಾತನಾಡುವುದು ಅವರಿಗೆ ಅರ್ಥವಾಗುವುದಿಲ್ಲ. ಅವರಿಗೆ ಇಂಗ್ಲೀಷು ಬರುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾನು ಕನ್ನಡದಲ್ಲಿ ಮಾತನಾಡುವುದು. ನನಗೆ ಇಂಗ್ಲಿಷು ಬರುವುದಿಲ್ಲ. ಇದರಿಂದ ತಮಗೂ ತೊಂದರೆಯಾಗಿರಬಹುದು.

ಅಧ್ಯಕ್ಷರು.—ಮಾನ್ಯ ಸದಸ್ಯರು ಏನು ಹೇಳುವುದಿದ್ದರೂ ಅದನ್ನು ಹತ್ತು ನಿಮಿಷಗಳಲ್ಲಿ ಮುಗಿಸಿ ಹೇಳಲಿ. He may say whether he wants to oppose the provisions of the Bill.

ಶ್ರೀ ಎಸ್. ಗೋಪಾಲ ಗೌಡ.—ಹತ್ತು ನಿಮಿಷಗಳೇಕೆ, ಈಗಲೇ ಬೇಕಾದರೂ ಮುಗಿಸುತ್ತೇನೆ. ನನಗೆ ಭಾಷಣ ಮಾಡುವುದಕ್ಕೆ ಅನೇಕ ಸ್ಥಳಗಳಿವೆ. ಅಲ್ಲಿ ಮಾಡುತ್ತೇನೆ. ನಾನು ಏನು ಹೇಳುತ್ತಿದ್ದೆ ಎಂದರೆ, ಈ ಸರಕಾರ ತಾನೇ ಜಾರಿಗೆ ಕೊಟ್ಟಂತಹ ಕಾನೂನನ್ನು ಕಾರ್ಯಗತಗೊಳಿಸಲು ಅಸಮರ್ಥವಾಗಿರುವುದೂ ಅಲ್ಲದೆ ಇದರ ಒಂದು ವಿಧಿಯನ್ನು ಪಟ್ಟ ಭದ್ರ ಹಿತಗಳ ಶಕ್ತಿಯನ್ನು ಕಿತ್ತುಕೊಳ್ಳುವುದಕ್ಕಾಗಿ ಮಾಡಿದ್ದರೂ ಆ ಶಕ್ತಿಯನ್ನು ಮುಂದುವರಿಸಲು ಅವಕಾಶ ಕೊಟ್ಟಿದ್ದು. ಇದರಿಂದ ರಾಜ್ಯಪಾಲರು ಜರಾಯಿಸಿರತಕ್ಕ ಅಧಿಕಾರ, ಕಾನೂನುಬಾಹಿರವಾಗಿದೆ ಎಂದು ಹೇಳಬೇಕಾಗಿದೆ. ಇಂತಹ ಅಧಿಕಾರವನ್ನು ಅವರು ಜರಾಯಿಸಬಾರದಾಗಿತ್ತು ಮತ್ತು ಸರ್ಕಾರಧವರು ಕೂಡ ಇಂತಹ ಸುಗ್ರಿವಾಜ್ಞೆಗಳನ್ನು ಹೊರಡಿಸುವ ಹವ್ಯಾಸಕ್ಕೆ ಹೋಗಬಾರದಾಗಿತ್ತು. ಹಾಗೆ ಹೋಗಿರುವುದರಿಂದ ಸರಕಾರ ತಮ್ಮನ್ನು ಪಟ್ಟ ಭದ್ರಹಿತಗಳಿಗೆ ಮಾರಾಟ ಮಾಡಿಕೊಂಡಂತಾಗಿದೆ. ಇಂತಹ ಸುಗ್ರಿವಾಜ್ಞೆ ಹೊರಡಿಸುವುದು ಅಕ್ರಮ, ಅವ್ಯವಹಾರಿಕವಾದುದು ಮತ್ತು ರಾಜ್ಯಾಂಗಕ್ಕೆ ವಿರೋಧವಾಗುವಂತೆ ರಾಜ್ಯಪಾಲರು ತಮ್ಮ ಅಧಿಕಾರವನ್ನು ಇದರಲ್ಲಿ ದುರುಪಯೋಗಪಡಿಸಿಕೊಂಡಿದ್ದಾರೆ. ಪಟ್ಟಭದ್ರ ಹಿತಗಳ ರಕ್ಷಣೆ ಮಾಡುವುದಕ್ಕಾಗಿ ಅಧಿಕಾರವನ್ನು ಇದರಲ್ಲಿ ದುರುಪಯೋಗಪಡಿಸಿಕೊಂಡು ಇಂತಹ ಕಾನೂನನ್ನು ಇಲ್ಲಿ ತರುತ್ತಿದ್ದಾರೆ. ಆದುದರಿಂದ ಈ ಸಭೆ ಈ ಒಂದು ಅಧಿನಿಯಮವನ್ನು ತಿದ್ದುಪಡಿ ಮಾಡಬೇಕೆಂದು ತಂದಿರುವ ಕಾನೂನನ್ನು ಅಂಗೀಕರಿಸಬಾರದು ಮತ್ತು ಇಲ್ಲ ನಾನು ತಂದಿರುವ ನಿರ್ಣಯವನ್ನು ಈ ಸಭೆ ಅಂಗೀಕರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಪಿ. ಕೃಷ್ಣಪ್ಪ.—ಸ್ವಾಮೀ.....

Sri A. KRISHNA SHETTY (Mangalore II).—I want to support the motion.

Mr. SPEAKER.—There is nothing like supporting.

Sri A. KRISHNA SHETTY.—I am the mover.

Mr. SPEAKER.—Does it mean that the member is again moving the motion? If he wants five minutes, he may take.

Sri A. KRISHNA SHETTY.—I want to speak slowly.....

Mr. SPEAKER.—He may speak with the slowest speed and conclude in five minutes.

Sri A. KRISHNA SHETTY.—I am asking the Chair to give me ten minutes.

Mr. SPEAKER.—All right, he may take ten minutes and close. He can sit if he feels weak. But let him not transgress the time limit.

Sri A. KRISHNA SHETTY.—I am not weak, Sir.

ಶ್ರೀ ಎ. ಕೃಷ್ಣಶೆಟ್ಟಿ.—ಸ್ವಾಮೀ, ಈ ಭೂಸುಧಾರಣೆ ಮಸೂದೆಯ ಮೇಲೆ ಗವರ್ನರವರು ಮಾಡಿರುವ ಈ ಸುಗ್ರಿವಾಜ್ಞೆ ಅಥವಾ ಆರ್ಡಿನೆನ್ಸ್ ತಂದಿರುವುದನ್ನು ವಿರೋಧಿಸಿ ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ತಂದಿರತಕ್ಕ ಸೂಚನೆಯನ್ನು ಅನುಮೋದಿಸುತ್ತಾ ಒಂದೆರಡು ವಿಷಯುಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ.

ಸ್ವಾಮೀ, ಈ ಭೂಸುಧಾರಣೆಯ ಕಾನೂನು ಬಂದು ಸುಮಾರು ಆರು ವರ್ಷಗಳಾದವು. 1961ನೇ ಇಸವಿಯಲ್ಲಿ ಶ್ರೀ ಕಡಿದಾಳ್‌ಮಂಜಪ್ಪನವರು ರೆವೆನ್ಯೂ ಮಂತ್ರಿಗಳಾಗಿದ್ದಾಗ ಜತ್ತಿಯವರು ಈ ಭೂಸುಧಾರಣೆ ಮಸೂದೆ ತರಬೇಕೆಂದು ತಂದರು. ಇದನ್ನು ತಂದು ಆರು ವರ್ಷಗಳಾದರೂ ಈ ಭೂಸುಧಾರಣೆಯನ್ನು ಜಾರಿಗೆ ತರಲಿಕ್ಕೆ ಸರಕಾರಕ್ಕೆ ನಿರ್ದಿಷ್ಟ ಅವಧಿಯೊಳಗೆ ಆಗಲಲ್ಲ ಎಂದು ಹೇಳಿ ಈ ಒಂದು ಆರ್ಡಿನೆನ್ಸನ್ನು ಗವರ್ನರ ಕಡೆಯಿಂದ ಹೊರಡಿಸಿದ್ದು ನಿಜವಾಗಿಯೂ ಬಹಳ ಆಶ್ಚರ್ಯ

(ಶ್ರೀ ಎ. ಕೃಷ್ಣಶೆಟ್ಟಿ)

ಕರವಾದ ಸಂಗತಿ. ಇದು ದೇಶದಲ್ಲಿರುವ ಜನತೆಯ ಹಾಗೂ ರೈತರ ಒಂದು ನ್ಯಾಯವಾದ ಹಕ್ಕಿಗೆ ಒಂದು ಧಕ್ಕೆ ತರುವ ಹಾಗೂ ಗಂಡಾಂತರವನ್ನು ತರುವ ವಿಷಯ ಎನ್ನುವುದಕ್ಕೆ ಅಂತಹ ಪರಿಸ್ಥಿತಿ ಈ ದೇಶದಲ್ಲಿರಲಿಲ್ಲ ಮತ್ತು ಗಂಡಾಂತರ ಪರಿಸ್ಥಿತಿಯೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಈ ಒಂದು ಆರ್ಡಿನೆನ್ಸ್‌ನ್ನು ತರುವ ಅಗತ್ಯವಿರಲಿಲ್ಲ ಎಂದು ನಾನು ಹೇಳುತ್ತೇನೆ. ಈ ಆರ್ಡಿನೆನ್ಸನ್ನು ಒಂದು ವಿಶೇಷ ಸಂದರ್ಭದಲ್ಲಿ ತಂದಿದೆ ಎಂದರೆ, ಕಾಯಿದೆಗೆ ಸಂಬಂಧಪಟ್ಟಂತೆ ಭೂಮಾಲೀಕರು ರೈತರಿಂದ ಜಮೀನನ್ನು ಕಿತ್ತುಕೊಂಡು ದೇಶದಲ್ಲಿ ಒಂದು ಅಂದೋಲನ ನಡೆಸುತ್ತಿದ್ದಾರೆ ಹಾಗೂ ದೇಶಕ್ಕೆ ಆಪತ್ತು ಒದಗಿ ಬಂದಿದೆ ಎಂದು ಇದ್ದರೆ ಇಂತಹ ಸುಗ್ರೀವಾಜ್ಞೆಗಳನ್ನು ತರಬಹುದಿತ್ತು. ಆದರೆ ರಾಜ್ಯದಲ್ಲಿ ಅಂತಹ ನಿರ್ದಿಷ್ಟವಾದ ಕಾರಣಗಳು ಇಲ್ಲವಿದ್ದರೂ ಭೂಸುಧಾರಣೆಯ ಮಟ್ಟಿಗೆ ಭೂ ಮಾಲೀಕರುಗಳಿಗೆ ಅನುಕೂಲ ಮಾಡಿ ಕೊಡಬೇಕೆನ್ನುವ ಉದ್ದೇಶದಿಂದ ಇದನ್ನು ಇಲ್ಲಿ ತರಲಾಗಿದೆ. ಇದು ರೈತ ಹಾಗೂ ಗೇಣೀದಾರರ ಪ್ರಶ್ನೆಯಲ್ಲ. ಭೂ ಮಾಲೀಕರು ಒಂದು ಅವಧಿಯೊಳಗೆ ಸರಿಯಾದ ವಿವರಗಳನ್ನು ಕೊಡುವುದಕ್ಕೆ ಆಗಲಿಲ್ಲ ಎನ್ನುವ ಒಂದು ಕುಂಟು ನೆಪ ಹೇಳಿ ಚುನಾವಣೆ ಸಮಯದಲ್ಲಿ ಅವರ ಸಹಾಯ ಸಹಕಾರಗಳನ್ನು ಪಡೆಯಲು ಸರ್ವ ವಿಧವಾದ ಅನುಕೂಲಗಳನ್ನು ಪಡೆಯಲಿಕ್ಕೆ ಬೇಕಾಗಿ ಇಂತಹ ಒಂದು ಆರ್ಡಿನೆನ್ಸ್ ತಂದಿದ್ದಾರೆ. ಇದರಲ್ಲಿ ಶೇಕಡಾ ನೂರರಲ್ಲಿ ಅರವತ್ತು ಜನರಿಗೆ ಅನುಕೂಲ ಮಾಡಬೇಕಾಗುತ್ತದೆ ಎಂದು ಈ ರೀತಿಯಾದ ಒಂದು ಶಾಸನ ತರಲಿಕ್ಕೆ ಮೊದಲು ಆಗಲಿಲ್ಲ ಎಂದು ಆರ್ಡಿನೆನ್ಸ್‌ನ್ನು ಮೊದಲಿಗೆ ತಂದದ್ದು ಪ್ರಜಾಪ್ರಭುತ್ವಕ್ಕೆ ನ್ಯಾಯವಾದುದಲ್ಲ ಮತ್ತು ಇದು ಬಹಳ ವಿರೋಧವಾಗುತ್ತದೆ ಎನ್ನುವುದನ್ನು ಮುಖ್ಯವಾಗಿ ಇದರಲ್ಲಿ ನೋಡಬೇಕು. ಈಗ ಈ ಕಾನೂನು ತಂದದ್ದಾದರೂ ಏಕೆ? ಭೂ ಮಾಲೀಕರಿಗೆ ಸಮಯ ಇರಲಿಲ್ಲ, ಅವರ ಹಿಡುವಳಿಯಲ್ಲಿರುವ ಸ್ವತ್ತು ಹಾಗೂ ಇನ್ನಿತರ ಭೂಮಿಗಳ ಮಟ್ಟಿಗೆ ಅರ್ಜಿಗಳನ್ನು ಅಥವಾ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಡಲಿಕ್ಕೆ ಇಷ್ಟು ವರ್ಷಗಳಾದರೂ ಅವರಿಗೆ ಸಾಧ್ಯವಾಗಲಿಲ್ಲ ಎಂದು ಇಲ್ಲಿ ಹೇಳುತ್ತಿದ್ದಾರೆ. ಭೂ ಸುಧಾರಣೆ ಕಾನೂನಾಗಿ ಆರು ವರ್ಷಗಳಾದರೂ ಇವರಿಗೆ ಅದನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ಈ ಸುಧಾರಣೆಯನ್ನು ನ್ಯಾಷನಲ್ ಪ್ಲಾನಿಂಗು ಕಮಿಷನ್ನಿನವರಲ್ಲಿ ತೆಗೆದುಕೊಂಡು ಹೋದಾಗ ಅವರು ಏನು ಹೇಳಿದರು ಎಂದರೆ, ಈ ಭೂಸುಧಾರಣೆ ಮಸೂಡೆಯಾಗದೇ ಹೋದರೆ ಆಹಾರದ ಕೊರತೆಯನ್ನು ಪರಿಹರಿಸುವುದಕ್ಕೆ ಆಗುವುದಿಲ್ಲ; ಆಹಾರದ ಅಭಾವ ಬರಲಿಕ್ಕೆ ಈ ಭೂಸುಧಾರಣೆ ಆಗದೇ ಇದ್ದುದೇ ಮುಖ್ಯ ಕಾರಣ ಎಂದು ಈ ಕಮಿಷನ್ನಿನವರು ಹಾಗೂ ಅನೇಕ ಕಾಂಗ್ರೆಸ್ಸಿನ ತಜ್ಞರು ಹೇಳಿದರು. ಈ ರಾಜ್ಯದಲ್ಲಿ ಭೂಸುಧಾರಣೆಯಾಗದೇ ರೈತರ ಹಿತರಕ್ಷಣೆಯಾಗುವುದಿಲ್ಲ. ನಮ್ಮ ದೇಶದಲ್ಲಿ ಆಹಾರ ಹೆಚ್ಚು ಸಿಗಲಿಲ್ಲ ಎಂದು ಹೊರದೇಶಗಳಿಗೆ ಹೋಗಿ ಭಿಕ್ಷೆ ಬೇಡುತ್ತಿರುವುದರಿಂದಾಗಿ ಇಂದು ನಮ್ಮಲ್ಲಿ ಆಹಾರದ ಉತ್ಪತ್ತಿ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಇಂದು ಈ ರೀತಿಯಾಗಿ ಆಹಾರದ ಪ್ರಶ್ನೆ ಇದೆ ಎಂದು ಹೊರದೇಶಗಳವರಿಗೆ ಕೈಚಾಚಿ ಅವರ ಸಹಾಯವನ್ನು ಪಡೆಯಬೇಕೆಂದು ಹೋದಾಗ ಅವರು ಕೆಲವು ಷರತ್ತುಗಳನ್ನು ವಿಧಿಸಿ ಕೊಡುತ್ತಿದ್ದಾರೆ. ಈಗ ಆ ರೀತಿಯಾಗಿ ಅಮೆರಿಕಾ ದೇಶದವರ ಷರತ್ತುಗಳಿಗನುಗುಣವಾಗಿ ಆಹಾರ ಪದಾರ್ಥಗಳನ್ನು ಪಡೆದು ಉಪಯೋಗಿಸಿಕೊಳ್ಳಲಿಕ್ಕೆ ಹೋಗಿದ್ದಾರೆ. ಇಂತಹ ಒಂದು ಸ್ಥಿತಿಯಲ್ಲಿ ನಮ್ಮ ಪಂಚವಾರ್ಷಿಕ ಯೋಜನೆಗಳು ನಡೆಯುತ್ತಿವೆ. ಪಂಚವಾರ್ಷಿಕ ಯೋಜನೆಗಳನ್ನು ಆರಂಭ ಮಾಡುವಾಗಲೇ ಈ ಭೂಸುಧಾರಣೆಯನ್ನು ತರಬೇಕಾಗಿತ್ತು. ಮೊದಲನೆ ಪಂಚವಾರ್ಷಿಕ ಯೋಜನೆ ತಂದರು, ಎರಡನೇ ಪಂಚವಾರ್ಷಿಕ ಯೋಜನೆ ತಂದರು, ಆಗಲೂ ಭೂಸುಧಾರಣೆ ಜಾರಿಗೆ ತರಲಿಕ್ಕೆ ಸಾಧ್ಯವಾಗಲಿಲ್ಲ. ನಾಲ್ಕನೇ ಯೋಜನೆಯಲ್ಲಿ ಎಲ್ಲ ದೇಶಗಳವರ ಕಡೆಗೂ ಭಿಕ್ಷಾ ಪಾತ್ರೆ ಹಿಡಿದು ಕೊಂಡು ಎಲ್ಲ ಪ್ರಾಂತಗಳಿಂದಲೂ ಆಹಾರ ಬೇಕೆಂದು ಕೇಳಲು ಹೊರಟಿದ್ದಾರೆ. ಇದೇ ಹೊರದೇಶಗಳಿಂದ, ಎಂದರೆ, ಅಮೆರಿಕಾ ದೇಶಕ್ಕೆ ದೊಡ್ಡ ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಹೋಗಿ ಕೋಟಿಗಟ್ಟಲೆ ಆಹಾರ ಪದಾರ್ಥಗಳನ್ನು ಅವರ ಷರತ್ತುಗಳನ್ನನುಸರಿಸಿ ತರಿಸಿಕೊಳ್ಳುತ್ತಿದ್ದಾರೆ. ಮೊದಲು ರಾಜಕೀಯ ದೃಷ್ಟಿಯಿಂದ ಹೊರ ದೇಶದವರು ಆಹಾರ ಕೊಡಲಿಕ್ಕೆ ಒಪ್ಪದಿದ್ದರೂ ಕೊನೆಗೆ ಕೆಲವು ಷರತ್ತುಗಳಿಗೆ ಒಪ್ಪಿಕೊಂಡು ಇವೊತ್ತು ಅಮೆರಿಕಾ ದೇಶದವರ ಕೈಗೊಂಬೆಗಳಾಗಿ ಆಹಾರವನ್ನು ತರಿಸುತ್ತಿದ್ದಾರೆ. ಇಂತಹ ಒಂದು ಆರ್ಡಿನೆನ್ಸ್‌ನ್ನು ತಂದು ಆಹಾರವನ್ನು ಬೆಳೆಯುವ ರೈತನಿಗೂ ಭೂಮಾಲಕರಿಗೂ ಇಲ್ಲದ ತೊಂದರೆಗಳನ್ನುಂಟುಮಾಡುವುದು ಸರಿಯೇ? ಇದು ಅನ್ಯಾಯವಲ್ಲವೇ? ಇಂತಹ ಒಂದು ಕಾನೂನು ತರುವುದು ಸರ್ವಥಾ ಸರಿಯಲ್ಲ ಹಾಗೂ ಯೋಗ್ಯವಾದುದೂ ಅಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಸ್ಪೀಕರ್, ನಮ್ಮ ಜಿಲ್ಲೆಯಲ್ಲಿ ನೂರು ಜನ ರೈತರಲ್ಲಿ ಅರವತ್ತು ಜನ ಚಾಲಗೇಣಿ ರೈತರು ಎಂದು ಇದ್ದಾರೆ. ಈಗಾಗಲೇ ತಮಗೆ ಗೊತ್ತಿರುವಂತೆ ಪೋಲೀಸಿನವರ ಸಹಾಯ ಪಡೆದು ಭೂ

ಮಾಲಕರು ನಮ್ಮಲ್ಲಿ ಭೂಮಿ ಮಾಡುತ್ತಿರುವವರಿಂದ ಭೂಮಿಯನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಡೆಯಲು ಅನುಕೂಲವಾಗುವಂತೆ ಇಲ್ಲಿಯವರೆಗೆ ಕಾನೂನು ಬರಲಿಲ್ಲ. ಅದರಿಂದಾಗಿ ಭೂಮಾಲೀಕರಿಗೂ ಹಾಗೂ ಚಾಲಗೇಣಿ ರೈತರಿಗೂ ಆಗಾಗ್ಗೆ ಘರ್ಷಣೆಗಳು ನಮ್ಮಲ್ಲಿ ಆಗುತ್ತಿವೆ. ಇದನ್ನು ತಪ್ಪಿಸಲಿಕ್ಕೆ ಇನ್ನೂ ಸಾಧ್ಯವಾಗಲಿಲ್ಲ. ಭೂಸುಧಾರಣೆ ಕಾನೂನನ್ನು ಜಾರಿಗೆ ತರದೆ ನಿಧಾನ ಮಾಡುತ್ತಿರುವುದರಿಂದ ಹಾಗೂ ಮುಂದುವರಿಸುತ್ತಿರುವುದರಿಂದ ಈ ಸರಕಾರ ಒಂದು ದೊಡ್ಡ ತಪ್ಪು ಮಾಡಲಿಕ್ಕೆ ಹೊರಟಿದೆ. ಇದರಿಂದ ಭೂಮಾಲೀಕರುಗಳಿಗೆ ಇನ್ನೂ ಹೆಚ್ಚು ಅವಕಾಶ ಕೊಟ್ಟು ರೈತರಿಂದ ಭೂಮಿ ಕಿತ್ತುಕೊಳ್ಳಲು ಸಹಾಯ ಮಾಡಿದೆ. ಕಾನೂನು ತರಲಾಗಲಿಲ್ಲ ಎಂದು ಆರ್ಡಿನೆನ್ಸ್ ತರಲು ದೇಶದಲ್ಲಿ ಅಂತಹ ಗಂಡಾಂತರ ಪರಿಸ್ಥಿತಿಯೂ ಇರಲಿಲ್ಲ. ಹಾಗಿದ್ದರೂ ಕೂಡ ಕಾನೂನನ್ನು ಜಾರಿಗೆ ತರುವುದನ್ನು ಮುಂದುವರಿಸಿ ಕೆಲವು ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ತಂದೆದ್ದು ಬಹಳ ಶೋಚನೀಯವಾದ ವಿಚಾರ. ಇಂತಹ ಮನೋಧೆಗೆ ಅನುಮತಿಯನ್ನು ಯಾರೂ ಕೊಡಬಾರದು. ಮತ್ತು ಈ ಬಿಲ್ಲನ್ನು ಇಲ್ಲಿಯವರೆಗೆ ಜಾರಿಗೆ ತರದೇ ಇರಲು ಅಂತಹ ನ್ಯಾಯವಾದ ಕಾರಣಗಳೂ ಇರಲಿಲ್ಲ. ಇದು ನಮ್ಮ ರಾಜ್ಯದಲ್ಲಿರುವ ಎಲ್ಲ ಹಳ್ಳಿಗಳವರ ಪ್ರಶ್ನೆ. ಆದುದರಿಂದ ಮಾನ್ಯ ಸದಸ್ಯರು ಇಲ್ಲಿ ತಂದಿರುವ ನಿರ್ಣಯವನ್ನು ಈ ಸಭೆ ಒಪ್ಪಿಕೊಳ್ಳಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸಭಾಪತಿಗಳೇ, ಮೈಸೂರಿನ ಭೂಸುಧಾರಣೆ ಕಾನೂನನ್ನು ಎರಡನೇ ಅಕ್ಟೋಬರ 1965ರಂದು ಜಾರಿಗೆ ತಂದಿದ್ದಾರೆ. ಆದ್ದರಿಂದ ತರಲಿಲ್ಲ ಎಂದು ಹೇಳುವುದರಲ್ಲಿ ವಿನೂ ಅರ್ಥವಿಲ್ಲ. ಇವರು ಯಾವಾಗಲೂ ಹೇಳುವ ಧೋರಣೆಯಲ್ಲೇ ಹೇಳುತ್ತಿದ್ದಾರೆ. ಈಗಾಗಲೇ ಆ ನಿಶ್ಚಯಿಸಿದ ದಿನದ ಒಂದು ವರ್ಷದೊಳಗಾಗಿ ಯಾರಾದರೂ ಭೂಮಾಲಿಕರು ತಮ್ಮ ಸ್ವಂತ ನ್ಯಾಯವಾದ ವ್ಯವಸಾಯಕ್ಕೋಸ್ಕರವಾಗಿ ಗೇಣಿದಾರರಿಂದ ಭೂಮಿಯನ್ನು ವಾಪಸು ಪಡೆಯುವುದಕ್ಕಾಗಲೀ, ಅಥವಾ ಗೇಣಿದಾರರಿಂದ ಭೂಮಾಲಿಕರು ಭೂಮಿಯನ್ನು ಕಿತ್ತುಕೊಳ್ಳದಿರುವುದಕ್ಕಾಗಲೀ ಸರ್ಕಾರದವರು ಈ ಕಾಲವನ್ನು ಮುಂದುವರಿಸಬೇಕಾಗಿ ಬಂತು. ಇದರಲ್ಲಿ Standard acre ಎನ್ನುವುದನ್ನು ತೀರ್ಮಾನ ಮಾಡಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಏಕೆಂದರೆ, ಮೈಸೂರು ದೇಶದಲ್ಲೆಲ್ಲಾ ಇರುವ ಭೂಮಿ ಒಂದೇ ರೀತಿಯಾಗಿರುವುದಿಲ್ಲ. ಉದಾಹರಣೆಗೆ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಮತ್ತು ಬಿಜಾಪುರದ ಭೂಮಿಯಾಗಲೀ ಒಂದೇ ತೆರನಾಗಿರುವುದಿಲ್ಲ. ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯಲ್ಲಿವೆ. ಆದ್ದರಿಂದ ಆ ಸ್ಟ್ಯಾಂಡರ್ಡ್ ಎಕರೆ ಆಗಬೇಕಾದರೆ, ಮಳೆ ಎಷ್ಟು ಬಿಳುತ್ತದೆ. ಎಂಬ ಬಗೆಗೆ ಸರಾಸರಿ ತೆಗೆದುಕೊಂಡು ಯಾವ ವರ್ಗಕ್ಕೆ ಸೇರುತ್ತದೆಂಬುದನ್ನು ತೀರ್ಮಾನಮಾಡಬೇಕು. ಮತ್ತು ಸ್ಟ್ಯಾಂಡರ್ಡ್ ಎಕರೆಯನ್ನು ಯಾವ ಯಾವ ಏರಿಯಾದಲ್ಲಿ assured irrigation ಇದೆ. ಎಂಬುದನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ಇಲ್ಲಿ ರಷ್ಯಾದಲ್ಲಿ ಉಪಯೋಗಿಸುವಂತಹ ಪದಗಳನ್ನು ಉಪಯೋಗಿಸುತ್ತಾ ಹೋದರೆ ಭೂಮಿಯ ಇತಿಹಾಸವಾಗುವುದಿಲ್ಲ. ನಮ್ಮಲ್ಲಿ ಅಶೂರ್ಡ್ ಇರಿಗೇಶನ್ ಇದೆ, ಆದರೆ ಪಕ್ಕದಲ್ಲಿರುವ ಹಳ್ಳಿಯಲ್ಲಿ ಇಲ್ಲ; ಆದ್ದರಿಂದ ಅದನ್ನು ಎರಡನ್ನೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಆಯಾಯ ಪ್ರದೇಶದಲ್ಲಿ 20-25 ವರ್ಷದ ಸರಾಸರಿ ಮಳೆಯನ್ನು ತೆಗೆದುಕೊಂಡು ಇತ್ಯರ್ಥ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಕೇಳಿ ತಿಳಿದುಮಾಡಿ ತೆಗೆದುಕೊಳ್ಳಬೇಕಾದರೆ ಸ್ವಲ್ಪ ಕಾಲವಾಗುತ್ತದೆ. ಅಕ್ಟೋಬರ್ ಎರಡನೇ ತಾರೀಕಿನ ಸಮಯದಲ್ಲಿ ಅಸೆಂಬ್ಲಿಯು ನಡೆಯುತ್ತಾ ಇರಲಿಲ್ಲ. ಆದ್ದರಿಂದ ರಾಜ್ಯಪಾಲರು ಒಂದು ಆರ್ಡಿನೆನ್ಸ್ ಹೊರಡಿಸಬೇಕಾಯ್ತು. ಆದೇ ಒಂದು ಕಾರಣವಲ್ಲದೆ ಬೇರೇನೂ ಇಲ್ಲ. ಇದಕ್ಕಾಗಿ ನುಮ್ಮನೆ ಇಲ್ಲದ ಅಪಾದನೆಗಳನ್ನು ಮಾಡುವುದು ಸರಿಯಲ್ಲ. ಅನ್ಯಾಯವಾಗಿ ಸರ್ಕಾರವನ್ನು ನುಮ್ಮನೆ ಬಯ್ದರೆ ಪ್ರಯೋಜನವಿಲ್ಲ. ಆದ್ದರಿಂದ ಇದಕ್ಕೆ ಮಾನ್ಯ ಸಭೆಯು ಹೆಚ್ಚು ಕಾಲವನ್ನು ವ್ಯಯಮಾಡದೆ ದಯವಿಟ್ಟು ಇದಕ್ಕೆ ಆಶೀರ್ವಾದ ಮಾಡಿ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ನಿರ್ಣಯದ ವಿಷಯ ಅರ್ಥ ಮಾಡಿಕೊಂಡರೋ ಇಲ್ಲವೊ ಗೊತ್ತಿಲ್ಲ. ಏನೇ ಇರಲಿ, ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನಾನು ಈಗಾಗಲೇ ಹೇಳಿರುವ ಹಾಗೆ ರಾಜ್ಯಪಾಲರು ತಮ್ಮ ಶಾಸನ ಮಾಡತಕ್ಕ ಹಕ್ಕನ್ನು ಈ ಅಧಿನಿಯಮವನ್ನು ಹೊರಡಿಸಿದ ಪ್ರಕಾರ ಸ್ಪಷ್ಟವಾಗಿ ದುರುಪಯೋಗಪಡಿಸಿದ್ದಾರೆ ಮತ್ತು ಸರ್ಕಾರ ಅವರ ಹತ್ತಿರ ಈ ಅಧಿನಿಯಮವನ್ನು ಹೊರಡಿಸುವಾಗ ತಪ್ಪು ಅಭಿಪ್ರಾಯವನ್ನು ಕೊಟ್ಟು ತಮ್ಮ ಅಸಮರ್ಥತೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ ಮತ್ತು ಧನಿಕ ಭೂಮಾಲಿಕರ ಹಿತವನ್ನು ಕಾಪಾಡುವುದಕ್ಕಾಗಿ ರಾಷ್ಟ್ರಾಧ್ಯಕ್ಷರಿಂದ ಕೆಳಗಡೆ ಇರತಕ್ಕ ಅಧಿಕಾರಿಗಳ ತನಕ ನಡೆದು ಈ ಅಧಿನಿಯಮದಲ್ಲಿ ಪರ್ಯವಸಾನವಾಗಿದೆ. ಇಂಥ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು

(ಶ್ರೀ ಎಸ್. ಗೋಪಾಲಗೌಡ)

ಹೊರಡಿಸಬಾರದಿತ್ತು. ಇದರಿಂದ ಈಗಾಗಲೇ ಸಾಕಷ್ಟು ನಷ್ಟವಾಗಿದೆ. ಆದ್ದರಿಂದ ಈ ಸಭೆಯ ನಿರ್ಣಯವನ್ನು ಒಪ್ಪಬಾರದು ಎಂದು ಕೇಳಿಕೊಂಡು ಈ ನಿರ್ಣಯಕ್ಕೆ ನಿಮ್ಮೆಲ್ಲರ ಬೆಂಬಲ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I will put the resolution of Sri Gopala Gowda to the vote of the House. The question is :

"That this House disapproves the Mysore Land Reforms (Amendment) Ordinance, 1966 (Ordinance No. 2 of 1966)."

The motion was negatived.

MYSORE LAND REFORMS (AMENDMENT) BILL, 1966.

Motion to consider—(contd.)

ಶ್ರೀ ಎಂ. ಪಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಗೋಪಾಲ ಗೌಡರು ಮಾತನಾಡಿದ ವಿಷಯ ಹೇಳಬೇಕಾಗಿದೆ. ಈ ಆರ್ಡಿನೆನ್ಸ್ ತಂದುದು ಏಕೆಂದರೆ, ಮೂರು ತಿಂಗಳ ಸಮಯ ತೆಗೆದುಕೊಂಡು ಪೂರ್ತಿ ವಿವರಗಳೆನ್ನೆಲ್ಲಾ ಸಂಗ್ರಹಿಸಬೇಕಾಗಿರುವುದರಿಂದ ತಾರೀಕನ್ನು ಮುಂದುವರಿಸಬೇಕಾಯಿತು. ಅದರಿಂದ ಭೂಮಾಲಕರಿಗೂ ರೈತರಿಗೂ ಅನುಕೂಲವಾಗುತ್ತದೆ.

[Mr. Deputy Speaker in the Chair].

†ಶ್ರೀ ಎಚ್. ಆರ್ ಕೇಶವಮೂರ್ತಿ (ಗಂಡಸಿ).—ಈ ಸಭೆಯ ಮುಂದೆ ಇರತಕ್ಕ ಈ ತಿದ್ದುಪಡಿ ಮಸೂದೆ ಬಗ್ಗೆ ನಾವು ತೀವ್ರವಾಗಿ ಯೋಚಿಸಬೇಕಾಗಿದೆ. ಸರಕಾರ ಮನಸ್ಸಿಗೆ ಬಂದಂತೆ ಕಾನೂನು ಮಾಡಿ ಹಿಂದುಳಿದ ರೈತ ವರ್ಗಕ್ಕೆ, ಯಾವ ರೈತರಿಗೆ ಕಾನೂನಿನ ನಿಕಟ ಸಂಬಂಧ ಇಲ್ಲದೇ ಇರತಕ್ಕಂಥವರಿಗೆ, ತೊಂದರೆ ಕೊಡುತ್ತಿರುವುದನ್ನು ವರ್ಣಿಸಲಳವಲ್ಲ. ರೈತ ವರ್ಗಕ್ಕೆ ನ್ಯಾಯ ಮಾಡುತ್ತಿಲ್ಲ. ರೈತರ ವಿಷಯದಲ್ಲಿ ದಿನಕ್ಕೊಂದೊಂದು ಆರ್ಡರ್ ಮಾಡುತ್ತೀರಿ. ಒಂದಕ್ಕೊಂದು ಕಾನೂನು ಕೂಡ ವಿರೋಧಾಭಾಸವುಳ್ಳದ್ದಾಗಿವೆ. ಕನ್‌ಸಾಲಿಡೇಶನ್ ಆಫ್ ಹೋಲ್ಡಿಂಗ್ಸ್ ಎಂದು ಒಂದು ಕಾನೂನು ಮಾಡಿದರೆ ಇನ್ನೊಂದು ಕಾನೂನು ಫ್ರಾಗ್ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಎಂದು ಮಾಡಿದ್ದೀರಿ. ಒಂದಕ್ಕೊಂದು ವ್ಯತಿರಿಕ್ತವಾದ ಕಾನೂನು ಮಾಡುತ್ತೀರಿ. ಮಿನಿಮಂ ಹೋಲ್ಡಿಂಗ್ಸ್ ಒಂದು ಕಡೆ 10 ಎಕರೆ, ಇನ್ನೊಂದು ಕಡೆ 50 ಎಕರೆ, 100 ಎಕರೆ ಎಂದು ಮಾಡಿದೆ. ನಿಮಗೆ ಇಷ್ಟ ಬಂದವರಿಗೆ ಜಮೀನು ಕೊಡುತ್ತಾ ಇದ್ದೀರಿ. ಇದು ಯಾವ ಮಾರ್ಗ, ಇದು ಯಾವ ನೀತಿ, ಎಂದು ಕೇಳುತ್ತೇನೆ. ಈ ಮಸೂದೆಯ ಷೆಡ್ಯೂಲ್ 1ರಲ್ಲಿ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಎಂದು ಮಾಡಿರುವುದು ಎಲ್ಲರಿಗೂ ತಲೆನೋವು ತರತಕ್ಕಂಥ ಸಮಸ್ಯೆಯಾಗಿದೆ. ಮನಸ್ಸಿಗೆ ಬಂದ ಹಾಗೆ ಕ್ಲಾಸಿಫಿಕೇಷನ್ಸ್ ಮಾಡುತ್ತಿದ್ದೀರಿ. ಇದು ಒಂದಕ್ಕೊಂದು ಸಂಬಂಧವಿಲ್ಲ. ಎಷ್ಟಾ ಹುನಾವಣಿಗೆ ಮೊದಲು ಕಂದಾಯವನ್ನು ವಜಾ ಮಾಡುತ್ತೇವೆಂದು ಮಾನ್ಯ ನಚಿವರು ಹೇಳಿದ್ದು ಪೇಪರಿನಲ್ಲಿ ಬಂದಿದೆ. ಆದರೆ ತಾಲ್ಲೂಕು ಜಮಾಬಂದಿ ಹುಜೂರು ಜಮಾಬಂದಿ ಆಗುತ್ತಾ ಇದೆ, ಹಾಸನ ಜಿಲ್ಲೆಯಲ್ಲಿ ಹಿಂದೆ ತಡೆ ಹಿಡಿದ ಕಂದಾಯವನ್ನು ಡಿಮ್ಯಾಂಡಿನಲ್ಲಿ ಸೇರಿಸಿ ವಸೂಲ್ಮಾಡುತ್ತಿದ್ದಾರೆ. ರೈತ ಕೊಡುವ ಕಂದಾಯ ಕಡಿಮೆಯಾಗದೆ ಒಂದಕ್ಕೆ ನಾಲ್ಕರಷ್ಟು ಆಗಿದೆ. ಇಂದು ರೈತ ಕೊಡಬೇಕಾದುದು ಐದಾರರಷ್ಟು ಆಗಿದೆ. ಹೊಸ ಕಂದಾಯ ಜೊತೆಗೆ ಸೆಸ್ ಸಹ ಸೇರಿಸಿ ಕೊಡಬೇಕಾಗಿದೆ. ಮಾನ್ಯ ಕಂದಾಯ ಮಂತ್ರಿಗಳು ಇದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಜಿ. ವಿ. ಗೌಡ (ಷಾಳ್ಯ).—ಕಂದಾಯ ವಜಾ ಮಾಡಿ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕುತ್ತಾರೆ.

ಶ್ರೀ ಎಂ. ಪಿ. ಕೃಷ್ಣಪ್ಪ.—ಕಂದಾಯ ವಜಾ ಮಾಡಿದರೆ ನಿಮಗೆ ಏತಕ್ಕೆ ಹೊಟ್ಟೆ ಉರಿ !